# ಪ್ರಾರ್ಥನೆ

### ವಿಶ್ವರೂಪನಾದ ಶ್ರೀಕೃಷ್ಣನಿಗೆ ಅರ್ಜುನನ ಪ್ರಾರ್ಥನೆ

ನಮಃ ಪುರಸ್ತಾದಥ ಪೃಷ್ಠತಸ್ತೇ
ನಮೋಽಸ್ತು ತೇ ಸರ್ವತ ಏವ ಸರ್ವ
ಅನಂತವೀರ್ಯಾಮಿತವಿಕ್ರಮಸ್ತ್ವಂ
ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ||

(ಭಗವದ್ಗೀತಾ 11: 40)

ಹೇ ದೇವದೇವ! ಅಚಿಂತ್ಯಸ್ವರೂಪ! ಸರ್ವವ್ಯಾಪಿ! ಅನಂತ ವೀರ್ಯ! ಅಮಿತ ವಿಕ್ರಮ! ನಿನಗೆ ಮುಂದೆ ನಮಸ್ಕಾರ, ಹಿಂದೆ ನಮಸ್ಕಾರ, ಎಲ್ಲೆಡೆಗಳಲ್ಲಿಯೂ ನಮಸ್ಕಾರ.

ಪಿತಾಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ |
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮಪ್ರಭಾವ ||

(ಭಗವದ್ಗೀತಾ 11: 43)

ಅಪ್ರತಿಮ ಪ್ರಭಾವ! ಸಕಲಸೃಷ್ಟಿಗೂ ನೀನೇ ತಂದೆ, ಗುರುವು, ಪೂಜ್ಯತಮ, ಶ್ರೇಷ್ಠತಮ. ಲೋಕತ್ರಯದಲ್ಲಿಯೂ ನಿನಗೆ ಸಮಾನರೇ ಇಲ್ಲ; ಇನ್ನು ಹೆಚ್ಚಿನವರು ಆರಿರಬಲ್ಲರು?

ತಸ್ಮಾತ್ ಪ್ರಣಮ್ಯ ಪ್ರಣಿಧಾಯ ಕಾಯಂ
ಪ್ರಸಾದಯೇ ತ್ವಾಮಹಮೀಶಮೀಡ್ಯಮ್ |
ಪಿತೇವ ಪುತ್ರಸ್ಯ ಸಖೇವ ಸಖ್ಯುಃ
ಪ್ರಿಯಃ ಪ್ರಿಯಾಯಾರ್ಹಸಿ ದೇವ ಸೋಢುಮ್||

(ಭಗವದ್ಗೀತಾ 11: 44)

ಇದೋ! ಸ್ತುತ್ಯರ್ಹನೂ, ಮಹಾಪ್ರಭುವೂ ಆದ ನಿನಗೆ ಪ್ರಣಾಮಗೈಯುವೆ, ಪ್ರಸನ್ನನಾಗು. ತಂದೆಯು ಮಗನ ತಪ್ಪನ್ನೂ, ಸಖನು ಸಖನ ತಪ್ಪನ್ನೂ, ಪ್ರಿಯನು ಪ್ರಿಯಳ ತಪ್ಪನ್ನೂ ಮನ್ನಿಸುವಂತೆ, ನೀನೂ ನನ್ನ ತಪ್ಪುಗಳನ್ನು ಮನ್ನಿಸಬೇಕೆಂದು ಯಾಚಿಸುತ್ತೇನೆ.

# ಸೂಕ್ತಿಪ್ರಭ

## ಕ್ರಿಸ್ತವಾಣಿ

**ಪರಿಶುದ್ಧ** ಹೃದಯರೇ ಧನ್ಯರು, ಏಕೆಂದರೆ ಅವರೇ ಭಗವಂತನನ್ನು ಕಾಣುತ್ತಾರೆ.

**ಕಣ್ಣೇ** ದೇಹದ ದೀಪ. ಆದ್ದರಿಂದ ನಿನ್ನ ಕಣ್ಣು ಸರಿಯಾಗಿದ್ದರೆ ನಿನ್ನ ಇಡೀ ದೇಹ ಪ್ರಕಾಶಮಯವಾಗಿರುತ್ತದೆ. ಆದರೆ ನಿನ್ನ ಕಣ್ಣು ಸರಿಯಾಗಿಲ್ಲದಿದ್ದರೆ ನಿನ್ನ ಇಡೀ ದೇಹ ಕತ್ತಲುಮಯವಾಗಿರುತ್ತದೆ. ಹಾಗಾದರೆ ನಿನ್ನ ಅಂತರಂಗವೇ ಕತ್ತಲೆಯಿಂದ ಕೂಡಿದ್ದರೆ ಅದೆಂತಹ ದೊಡ್ಡ ಅಂಧಕಾರ!

**ನಿನ್ನಲ್ಲಿ** ಶ್ರದ್ಧೆಯಿದ್ದರೆ ನೀನು ಪ್ರಾರ್ಥನೆಯಲ್ಲಿ ಕೇಳಿದುದನ್ನೆಲ್ಲ ಪಡೆಯುತ್ತೀಯೆ.

**ನಿನ್ನಲ್ಲಿ** ಸಾಸಿವೆ ಕಾಳಿನಷ್ಟು ಶ್ರದ್ಧೆಯಿದ್ದರೂ, ಈ ಪರ್ವತಕ್ಕೆ ನೀನು, "ಅಲ್ಲಿಗೆ ಹೋಗು" ಎಂದು ಹೇಳಿದರೆ ಅದು ಚಲಿಸುತ್ತದೆ. ಆಗ ಯಾವುದೂ ನಿನಗೆ ಅಸಾಧ್ಯವಾಗುವುದಿಲ್ಲ.

**ನೀನು** ಜನರ ತಪ್ಪುಗಳನ್ನು ಕ್ಷಮಿಸಿದರೆ ಭಗವಂತನು ನಿನ್ನ ತಪ್ಪುಗಳನ್ನು ಕ್ಷಮಿಸುತ್ತಾನೆ. ಆದರೆ ನೀನು ಜನರ ತಪ್ಪುಗಳನ್ನು ಕ್ಷಮಿಸದಿದ್ದರೆ ಭಗವಂತನೂ ನಿನ್ನ ತಪ್ಪುಗಳನ್ನು ಕ್ಷಮಿಸುವುದಿಲ್ಲ.

**ಮನುಷ್ಯನು** ಕೇವಲ ಅನ್ನದಿಂದ ಬದುಕುವುದಿಲ್ಲ, ಆದರೆ ಭಗವದ್ವಾಣಿಯನ್ನು ಅನುಸರಿಸಿ ಅವನು ಬದುಕುತ್ತಾನೆ.

**ಕುರುಡನು** ಕುರುಡನಿಗೆ ಮಾರ್ಗದರ್ಶನ ಮಾಡಿದರೆ ಇಬ್ಬರೂ ಗುಂಡಿಗೆ ಬೀಳುತ್ತಾರೆ.

**ನಿನ್ನ ಮಕ್ಕಳಿಗೆ** ಒಳ್ಳೆಯ ಉಡುಗೊರೆಯನ್ನು ಹೇಗೆ ಕೊಡಬೇಕೆಂಬುದು ನಿನಗೆ ತಿಳಿದಿರುವಾಗ, ಕೇಳುವವರಿಗೆ ಒಳ್ಳೆಯ ವಸ್ತುಗಳನ್ನು ಹೇಗೆ ಕೊಡಬೇಕೆಂಬುದು ಭಗವಂತನಿಗೆ ಇನ್ನೆಷ್ಟು ತಿಳಿದಿರಬೇಕು!